
# ಶರಣರ ಕಾಯಕತತ್ತ್ವ ಮತ್ತು ಆರ್ಥಿಕ ಸಮಾನತೆ



- ಟಿ. ವಿಶ್ವನಾಥಯ್ಯ

ಶರಣರ ಕಾಯಕತತ್ತ್ವದ ನಿರೂಪಣೆ ಮತ್ತು ಅದರ ಪ್ರಸ್ತುತತೆ ಈ ಲೇಖನದ ಮುಖ್ಯ ವಿಷಯ. ನಿವೃತ್ತ ಇಂಜಿನೀಯರ್ ಆಗಿರುವ ಶ್ರೀ ವಿಶ್ವನಾಥಯ್ಯನವರು ಈಗ ವಿಶ್ವಹಿಂದೂ ಪರಿಷತ್ತಿನ ಮೈಸೂರು ಶಾಖೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವರು.

ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಬಹು ದೊಡ್ಡ ಕ್ರಾಂತಿಯನ್ನು ಮಾಡಿದವರು ಬಸವಣ್ಣನವರು. ಇವರೊಂದಿಗೆ ಕೈಜೋಡಿಸಿದವರು ಅಲ್ಲಮಪ್ರಭು, ಸಿದ್ಧರಾಮಯ್ಯ, ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ ಮುಂತಾದ ಶರಣರು. ವೈಯಕ್ತಿಕವಾಗಿ ಆತ್ಮೋನ್ನತಿಯನ್ನು ಸಾಧಿಸುವುದರ ಜೊತೆಗೆ ಸಾಮೂಹಿಕವಾಗಿ ನಾಡಿಗೆ ನಾಡೇ ಉದ್ಧಾರವಾಗಬೇಕೆಂಬುದು ಅವರ ಸದಿಚ್ಛೆ ಯಾಗಿತ್ತು. ಅವರು ಸಮಾಜದಲ್ಲಿ ಮೇಲು-ಕೀಳು, ಹೆಣ್ಣು-ಗಂಡು, ಬಡವ-ಬಲ್ಲಿದ, ಆ ಜಾತಿ-ಈ ಜಾತಿ ಮುಂತಾದ ಎಲ್ಲಾ ಭೇದಗಳನ್ನೂ ನಿರ್ಮೂಲನ ಮಾಡುವ ಪ್ರಯತ್ನ ಮಾಡಿದರು. ಸ್ತ್ರೀಗೆ ಪುರುಷ ಸಮಾನ ಹಕ್ಕನ್ನು ದೊರಕಿಸಿ ಆಕೆಯನ್ನು ಮೋಕ್ಷಕ್ಕೆ ಅಣಿಗೊಳಿಸಿದರು. ಆವರೆಗೆ ಯಾರೂ ಬೋಧಿಸದೇ ಇದ್ದ ಕಾಯಕ ತತ್ವವನ್ನು ಸಮಾಜದಲ್ಲಿ ಪರಮತತ್ವವಾಗಿ ಸ್ವೀಕರಿಸಿ ಅನುಷ್ಠಾನಕ್ಕೆ ತಂದರು. 'ಕಾಯಕ' ಇದು ವಿಚಾರ ಜಗತ್ತಿಗೆ ಶರಣರು ಕೊಟ್ಟ ಬಹುದೊಡ್ಡ ಕಾಣಿಕೆ.

ಕಾಯಕವಿಲ್ಲದೆ ಯಾವ ವ್ಯಕ್ತಿಯೂ ಸಮಾಜದಲ್ಲಿ ಇರಕೂಡದೆಂಬುದೇ ಶರಣರ ಸಿದ್ಧಾಂತ. ಶರೀರವಿರುವವರೆಗೆ ಎಲ್ಲರೂ ಕಾಯಕ ಮಾಡಲೇಬೇಕು ಎಂಬುದು ಶರಣರ ಕಟ್ಟಳೆ. ಕಾಯಕ— ಅದು ಭಕ್ತಿ-ಜ್ಞಾನಯುಕ್ತ ಕ್ರಿಯೆ. ಆದ್ದರಿಂದ ಕಾಯಕದಲ್ಲಿ ತಾರತಮ್ಯ ತೋರಿಸುವುದು ಅಪರಾಧವೆಂದು ಸಾರಿದರು. ಕಾಯಕವೆಂದರೆ ಕೇವಲ ದುಡಿಮೆಯಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಮಾಡುವ ಕೆಲಸವೂ ಅಲ್ಲ. ಅಲ್ಲಿ ಶ್ರದ್ಧೆ ಇದೆ, ಪವಿತ್ರತೆ ಇದೆ. ನಿಃಸ್ವಾರ್ಥವಿದೆ. ದೇವರನ್ನು ಕಾಣುವ ಪರಿ ಇದೆ. ಪ್ರಾಮಾಣಿಕ ನಿಷ್ಠೆ ಇದೆ. ಎಲ್ಲ ವೃತ್ತಿ, ವ್ಯವಸಾಯಗಳು ಪರಮಾತ್ಮನ ಆರಾಧನೆ. ಅವನ್ನು ಆಚರಿಸುವಲ್ಲಿ ಎಲ್ಲರೂ ಒಂದೇ ಕುಲಕ್ಕೆ ಸಂಬಂಧಪಟ್ಟವರು. ಹೀಗೆ ಶರಣರು ಕಾಯಕವನ್ನು ಪ್ರತಿಪಾದಿಸಿದರು.

ಕಲ್ಯಾಣದ ಶರಣರಲ್ಲಿ ಎಲ್ಲ ಸ್ತರಗಳಿಗೆ ಸೇರಿದ ಜನರೂ ಇದ್ದರು. ನಾನಾರೀತಿಯ ಸಾಮಾಜಿಕ ಹಿನ್ನೆಲೆಯುಳ್ಳ, ನಾನಾ ಜಾತಿಯ, ವಿವಿಧ ವೃತ್ತಿಯ ಜನರು ಶರಣಧರ್ಮದಲ್ಲಿ ಸೇರಿದರು. ತಮ್ಮ ಮೊದಲಿನ ವೃತ್ತಿಯನ್ನು ಮುಂದುವರಿಸಿದರು. ಅವರ ವೃತ್ತಿಗಳು ಏನೇ ಇರಲಿ ಎಂಥವೇ ಇರಲಿ ಅವು ಪವಿತ್ರವೆನಿಸಿದವು. ಅವು ಸಮಾಜದ ಆರ್ಥಿಕ ನೆಲಗಟ್ಟನ್ನು ಭದ್ರಗೊಳಿಸಿದವು. ಅಂದಿನ ಶರಣ ಸಮೂಹದಲ್ಲಿ ಒಕ್ಕಲುತನ ಮಾಡುತ್ತಿದ್ದ ಅಜಗಣ್ಣ, ಇಳಿಹಾಳ ಬೊಮ್ಮಣ್ಣ, ಮುದ್ದಯ್ಯ, ಮುಕ್ತಾಯಿ ಮೊದಲಾದವರಿದ್ದರು. ಸಪ್ಪೆಯಲ್ಲಮದೇವ, ಅಣ್ಣಲ ದೇವಿ, ಮೋಳಿಗೆ ಮಾರಯ್ಯ ಮೊದಲಾದ ಕಟ್ಟಿಗೆ ಕುರುಳು ಮಾರುವವರಿದ್ದರು. ಅಮುಗಯ್ಯ, ಜೇಡರ ದಾಸಿಮಯ್ಯ ಮೊದಲಾದ ನೇಯ್ಗೆಯವರಿದ್ದರು. ನಿಜಲಿಂಗ ಚಿಕ್ಕಯ್ಯ ಶಾಂತಯ್ಯರಂತಹ ಓಲೆಯ ಕಾಯಕದವರಿದ್ದರು. ಕುರಿ ಕಾಯುವ ಗೊಲ್ಲಾಳ, ಹಗ್ಗ ಹೊಸೆಯುವ ನುಲಿಯ ಚಂಡಯ್ಯ, ಅಡಗೂಲಜ್ಜಿ ಪಿಟ್ಟವ್ವೆ, ಮೇದರ ಕಾಯಕದ ವೇಮಯ್ಯ, ಕೇತಯ್ಯ, ಕೊಟ್ಟಣದ ಸೋಮವ್ವೆ, ದನಗಾಹಿಗಳಾದ ರಾಮಣ್ಣ, ಗೋರಕ್ಷ, ತೆಲಗಹಾಲ ಮಸಣಯ್ಯ, ಚರ್ಮ ಹದಮಾಡುವ ಧೂಳಯ್ಯ, ಚನ್ನಯ್ಯ, ಅಗ್ಗವಣಿ ಹೊನ್ನಯ್ಯ, ಹಡಪದ ಅಪ್ಪಣ್ಣ ಹೀಗೆ ಭಿನ್ನ ಭಿನ್ನ ವೃತ್ತಿಯ ಸಮಾಜ ಚಾಲನೆಗೆ ಅವಶ್ಯವಾದ ಎಲ್ಲ ಕಾಯಕದ ಜನರೂ ಶರಣಸಮೂಹದಲ್ಲಿದ್ದರು.

## ಶರಣವಾಣಿಯಲ್ಲಿ ಕಾಯಕ

'ದೇವ ಸಹಿತ ಮನೆಗೆ ಬಂದೊಡೆ
ಕಾಯಕವಾವುದೆಂದು
ಬೆಸಗೊಂಡೆನಾದೊಡೆ ನಿಮ್ಮಾಣೆ!
ನಿಮ್ಮ ಪ್ರಮಥರಾಣೆ'
(ಬಸವಣ್ಣ)

ಭಕ್ತರ ಕುಲವನ್ನು ಕೇಳಕೂಡದು. ಅಂತೆಯೇ ಭಕ್ತರ ಕಾಯಕವನ್ನೂ ಕೇಳಕೂಡದು. ಭಕ್ತರೆಲ್ಲರೂ ಸಮಾನರು. ಅವರು ಕೈಕೊಂಡ ಕಾಯಕಗಳೆಲ್ಲಾ ಸಮಾನವಾದವುಗಳು ಎಂದು ಬಸವಣ್ಣನವರು ಪರಿಭಾವಿಸಿದ್ದರು.

ನಾನು ಆರಂಬ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯು ಆ ಕರ್ಮಫಲಭೋಗವ
ನೀ ಕೊಡುವೆಯೆಂಬುದ ನಾನು ಬಲ್ಲೆನು.

ನೀ ಕೊಟ್ಟ ದ್ರವ್ಯವ ನಿಮಗಲ್ಲದೆ
ಮತ್ತೊಂದು ಕ್ರಿಯೆಗೆ ಮಾಡೆನು
ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ,
ಕೂಡಲ ಸಂಗಮದೇವಾ (ಬಸವಣ್ಣ)

ಬಸವಣ್ಣ ಏನನ್ನೇ ಮಾಡಲಿ, ಅದರಲ್ಲೊಂದು ಸದುದ್ದೇಶ ಅಡಕವಾಗಿದೆ. 'ಕರ್ಮಫಲ ಭೋಗವ ನೀ ಕೊಡುವೆ' ಎಂದಿದ್ದಾರೆ ಬಸವಣ್ಣ. ಆದರೆ ಕರ್ಮಫಲ ಬೇಕು ಎಂದಿಲ್ಲ. ಕರ್ಮಕ್ಕೆ ತಕ್ಕ ಫಲ ಕೊಡುವಾತ ಪರಮಾತ್ಮ. ಕೊಟ್ಟವನಿಗೆ ಮರಳಿ ಕೊಟ್ಟು ಕೃತಾರ್ಥನಾಗುವಾತ (ನಾಗ ಬೇಕು) ಜೀವಾತ್ಮ. ನಿಮ್ಮದನ್ನು ನಿಮಗೆ ಕೊಡುವದಕ್ಕಾಗಿಯೆ ನಾನು ದುಡಿಯುವುದು. ಇಲ್ಲಿ ಫಲಾಪೇಕ್ಷೆಯಲ್ಲಿ ಸ್ವಾರ್ಥವಿಲ್ಲ, ಪರಾರ್ಥವಿದೆ. ಶರಣರ ಈ ಕಾಯಕ ತತ್ವಕ್ಕೂ 'ಕರ್ಮ ಫಲಾಪೇಕ್ಷೆ ಬೇಡ' ಎಂಬ ಶ್ರೀಕೃಷ್ಣನ ಕರ್ಮಯೋಗಕ್ಕೂ ಸಾಮ್ಯ ಕಂಡು ಬರುತ್ತದೆ.


ಭಕ್ತಿ ಭಂಡಾರಿ ಬಸವಣ್ಣನವರು.

'ಅಡಗೂಲಿಯ ಮನೆಯಂತೆ ಗದಿಗೆಯ
ಗಂಜಿಯಾಸೆಬೇಡ,
ಕೊಡುವರೆಂದೊಬ್ಬರ ಮನೆಗೆ ಅಡಿಗಡಿಗೆ
ಹೋಗಬೇಡ' (ಮನಸಂದ ಮಾಲಿತಂದೆ)

—ಆತ್ಮಗೌರವ ಕಳೆದುಕೊಂಡು ಬೇಡುವುದು ಅವನಿಗೆ ಸರಿತೋರದು.

'ಲಂಚನ ವಂಚನಕ್ಕೆ ಕೈಯಾನದ ಭಾಷೆ......
ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದಡೆ ನಾ
ಕೈಯೆತ್ತಿ ಮುಟ್ಟಿ ಎತ್ತಿದೆನಾದೊಡೆ
ನಿಮ್ಮಾಣೆ...' (ಸತ್ಯಕ್ಕ).

ಶಿವಶರಣೆ ಸತ್ಯಕ್ಕ ನಿಸ್ಪೃಹವೂ ಪ್ರಾಮಾಣಿಕವೂ ಆದ ಶುದ್ಧವಾದ ಕಾಯಕವನ್ನು ನಡೆಸುವುದರಲ್ಲಿ ತನ್ನ ನಿಲುವನ್ನು ಮೇಲ್ಕಂಡಂತೆ ವ್ಯಕ್ತಪಡಿಸಿದ್ದಾಳೆ.

ಕೃಷಿಯ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ?
ಕರ್ಮಯೋಗವ ಮಾಡದೆ ನಿರ್ಮಲ
ಚಿತ್ತವನರಿವ ಪರಿ ಇನ್ನೆಂತೋ? (ಸಿದ್ಧರಾಮೇಶ್ವರ)

ಕರ್ಮ(ಕರ್ತವ್ಯ)ರಹಿತನಾಗುವುದಕ್ಕಿಂತ ನಿರಂತರ ಕರ್ಮ ಮಾಡುವುದೇ ಲೇಸು. ಕರ್ಮರಹಿತನಾದರೆ ಶರೀರರಕ್ಷಣೆಯೂ ಕಠಿಣವಾಗುತ್ತದೆ—ಎಂಬುದು ಗೀತೆಯ ಆಶಯವಾದರೆ, ಸಿದ್ಧರಾಮೇಶ್ವರರು ತಮ್ಮ ಮೇಲ್ಕಂಡ ವಚನದಲ್ಲಿ, ಕರ್ಮ ಮಾಡದೆ ಹಸಿವನ್ನು ಹಿಂಗಿಸುವುದು ಸಾಧ್ಯವಿಲ್ಲ. ಇಲ್ಲಿ ಬೇಡಿ ತಿನ್ನುವುದಲ್ಲ, ಮಾಡಿ ತಿನ್ನುವುದು. ಕರ್ಮ ಬರಿ ಕೆಲಸವಾಗದೆ ಕರ್ಮಯೋಗವಾಗಬೇಕು. ಅದರಲ್ಲಿ ಸುಚಿತ್ತದಲ್ಲಿಯ ಸಚ್ಚಿದಾನಂದನನ್ನು ಅರಿಯಬಹುದು. ಗೀತೆಯಲ್ಲಿನ ಕರ್ಮಕ್ಕೂ ವಚನಗಳಲ್ಲಿನ ಕಾಯಕಕ್ಕೂ ಒಂದಿಷ್ಟು ಭಿನ್ನತೆ ಇದ್ದರೂ ಆಶಯದಲ್ಲಿ ಅಷ್ಟೊಂದು ಭಿನ್ನತೆ ಕಂಡುಬರುವುದಿಲ್ಲ ಎಂಬುದು ಗಮನಾರ್ಹ.

'ಕಾಯಕವಳಿದ ಠಾವಿನಲ್ಲಿ ಜೀವನದ ಎಡೆಯೂಟವುಂಟೆ?'
(ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ)

—ಕಾಯಕ ಮಾಡದಿದ್ದರೆ ಜೀವನಿಗೆ ಬದುಕುವ ಹಕ್ಕೇ ಇಲ್ಲವೆನ್ನುತ್ತಾಳೆ ಲಕ್ಕಮ್ಮ.

'ಕಾಯಕಕ್ಕೆ ಜಾತಿಗೋತ್ರಗಳ ಸೂತಕವಿಲ್ಲ.'
(ಕನ್ನಡಿ ಕಾಯಕದ ಅಮ್ಮಿದೇವಯ್ಯ)

'ಸತ್ಯಶುದ್ಧವಿಲ್ಲದುದು ಕಾಯಕವಲ್ಲ.' (ಕಾಳವ್ವೆ)

'ಅಸಿಯಾಗಲಿ ಕೃಷಿಯಾಗಲಿ, ವಾಚಕ, ವಾಣಿಕ, ಮಸಿಯಾಗಲಿ
ಮಾಡುವಲ್ಲಿ ಹುಸಿಯಿಲ್ಲದೆ ಇರಬೇಕು.' (ಮರೆಮಿಂಡಯ್ಯ)

'ಕಾಯಕ್ಲೇಶದಿಂದ ತನುಮನ ಬಳಲದೆ ಉದ್ದಂಡ ವೃತ್ತಿಯಲಿ
ಧನಗಳಿಸುವವನು ಕಳ್ಳ, ಪಾಪಿ, ಭ್ರಷ್ಟ....' (ಚೆನ್ನಬಸವಣ್ಣ)

'ಕಂದಿಸಿ, ಕುಂದಿಸಿ, ಬಂಧಿಸಿ,ನೋಯಿಸಿ
ಕಂಡವರ ಬೇಡಿತಂದು, ಜಂಗಮಕ್ಕೆ ಮಾಡಿಹೆನೆಂಬ
ದಂದುಗದ ಮಾಟಕ್ಕೆ ನೈವೇದ್ಯ ಸಲ್ಲದು,
ತನು ಕರಗಿ, ಮನ ಬಳಲಿ,ಬಂದ ತೆರೆದನುವನರಿತು
ಸಂದಿಲ್ಲದೆ, ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹಮಾಟ
ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು
ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ'
(ನುಲಿಯ ಚಂದಯ್ಯ).


ನುಲಿಯ ಚಂದಯ್ಯ

—ಸ್ವಂತ ದುಡಿಮೆಯಿಂದ, ಒಳ್ಳೆಯ ಮನಸ್ಸಿನಿಂದ ಸಂಪಾದಿಸಿದ ಕಾರೆಯ ಸೊಪ್ಪಿಗೆ ಬೆಲೆ ಇದೆಯೆ ಹೊರತು ಮತ್ತೊಬ್ಬರನ್ನು ಮೋಸಗೊಳಿಸಿ, ನೋಯಿಸಿ ಪಡೆದದ್ದು ದುರಾಸೆಯ ಫಲ. ಅದು ದೇವರಿಗೂ ಹಿತವಲ್ಲ, ಅವನ ಮನಸ್ಸಿಗೂ ಅಂತಃಕರಣಕ್ಕೂ ಆರೋಗ್ಯಕಾರಿಯಲ್ಲವೆಂದು ನುಲಿಯ ಚಂದಯ್ಯ ಹೇಳುತ್ತಾನೆ.

## ಕಾಯಕದ ಪ್ರಸ್ತುತತೆ

ಶರಣರ ಕಾಯಕ ತತ್ವಪ್ರಚಾರದಿಂದ ಸಮಾಜದಲ್ಲಿ ಕೈಬಿಟ್ಟು ಹೋಗಿದ್ದ ಉದ್ಯೋಗಗಳು ಪುನಃ ಪ್ರಾರಂಭವಾಗಿ ಎಲ್ಲರಿಗೂ ಉದ್ಯೋಗ ದೊರೆಯುವಂತಾಯಿತು. ಸರ್ವವಿಧ ಕಲೆಗಳು ಕೈಗಾರಿಕೆಗಳು ಅಭಿವೃದ್ಧಿಗೊಂಡುವು. ಎಲ್ಲರನ್ನೂ ಹುರಿದುಂಬಿಸಿ ಕರ್ತವ್ಯನಿಷ್ಠರನ್ನಾಗಿ ಮಾಡಿದವು. ಕಾಯಕವು ಕೇವಲ ಉದರ ನಿರ್ವಾಹವಾಗಿರದೆ ಮುಕ್ತಿ ಮಾರ್ಗವಾಗಿಯೂ ಪರಿಣಮಿಸಿತು. ಕಾಯಕ ತತ್ವಾಚರಣೆಯ ಫಲವಾಗಿ

'ಕಲ್ಯಾಣ ರಾಜ್ಯದಲ್ಲಿ ನೀಡುವವರುಂಟು, ಬೇಡುವವರಿಲ್ಲ;
ಬೇಡುವವರಿಲ್ಲದ ಕಾರಣ ಬಡವನಾದೆನಯ್ಯಾ!'

ಎಂದು ಬಸವಣ್ಣನವರು ಹೇಳುವಂತಹ ಪರಿಸ್ಥಿತಿ ಅಲ್ಲಿ ಉಂಟಾಯಿತು. ಸಮಾಜದ ಆರ್ಥಿಕ ಅಭಿವೃದ್ಧಿಗೆ ಕಾರಣವಾಯಿತು. ಗೃಹ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ ರಾಷ್ಟ್ರದ ದಾರಿದ್ರ್ಯವನ್ನು ಹೋಗಲಾಡಿಸಲು ಕಾರಣವಾಯಿತು. ಈ ರೀತಿ ಶರಣರ ಕಾಯಕ ತತ್ವ ಸಮಾಜದ ಭದ್ರತೆ, ಬಂಧುರತೆ ಹಾಗೂ ಮೇಲ್ಮೆಗೆ ಅತ್ಯುಪಯುಕ್ತವಾದ ಆರ್ಥಿಕಸಮಾನತೆಯನ್ನು ಸ್ಥಾಪಿಸುವುದರಲ್ಲಿ ಸಮರ್ಥವಾಯಿತು. ಶರಣರ ಕಾಯಕ ತತ್ವದ ವಿಶೇಷವೇನೆಂದರೆ ಕಾಯಕದ ಜೊತೆಗೆ ಇದು ದಾಸೋಹವನ್ನೂ ಪ್ರತಿಪಾದಿಸಿತು. ವ್ಯಕ್ತಿ ಶಾರೀರಿಕ ಶ್ರಮದಿಂದ ಗಳಿಸಿದ ಹಣ ತನ್ನ ಹಾಗೂ ತನ್ನ ಕುಟುಂಬಕ್ಕೆ ಸೀಮಿತವಾಗಿರದೆ, ಸಾರ್ವಜನಿಕರಿಗಾಗಿಯೂ ಮೀಸಲಾಗಿಡಬೇಕು ಎನ್ನುವುದು ಇವರ ಉದಾತ್ತ ವಿಚಾರವಾಗಿದೆ. ದಾಸೋಹತತ್ವದಿಂದಾಗಿ ದುಡಿಯುವ ವರ್ಗ, ದುಡಿಸಿಕೊಳ್ಳುವ ವರ್ಗ ಇಲ್ಲದಂತಾಗಿದೆ. ಶರಣರು ಸೃಷ್ಟಿಸಿದ ಆದರ್ಶ ಸಮಾಜದಲ್ಲಿ ಎಲ್ಲರೂ ದುಡಿಯುವವರೇ. ದುಡಿಸಿಕೊಳ್ಳುವವರು ಕೆಲವರು ಇದ್ದರೂ ಅವರು ದಾಸೋಹಕ್ಕಾಗಿ ಹಣ ವೆಚ್ಚ ಮಾಡುತ್ತಿದ್ದರು. ಈ ಪದ್ಧತಿಯಿಂದಾಗಿ ಅಂದಿನ ಸಮಾಜದಲ್ಲಿ ವರ್ಗ ಸಂಘರ್ಷವೇ ಇರಲಿಲ್ಲ. ಆರ್ಥಿಕ ಅಸಮಾನತೆಯೆನ್ನುವ ಪ್ರಶ್ನೆ ಉದ್ಭವಿಸಿರಲಿಲ್ಲ.

ಆಧುನಿಕ ಕಾಲದಲ್ಲಿ ಉದ್ಯೋಗಗಳಲ್ಲಿ ಮೇಲು ಕೀಳುಗಳನ್ನೆಣಿಸಿ ಮೇಲಾದ ಉದ್ಯೋಗವೇ ಕರ್ತವ್ಯ ಉಳಿದೆಲ್ಲವೂ ತ್ಯಾಜ್ಯವೆಂಬ ತಪ್ಪು ಭಾವನೆಯಿಂದ ನಿರುದ್ಯೋಗ ಹೆಚ್ಚಲು ಕಾರಣವಾಗಿದೆ. ಒಂದು ಉದ್ಯೋಗ ಮಾಡುವವನು ಕೀಳೆಂಬ ಕಲ್ಪನೆಯುಂಟಾಗಿ ಅನೇಕ ಉದ್ಯೋಗಗಳು ಕೈಬಿಟ್ಟುಹೋಗಿವೆ. ಉತ್ತಮವಾದ ಕಲೆಗಳೂ ಹಾಳಾಗಿವೆ. ದಾರಿದ್ರ್ಯವೂ ಹೆಚ್ಚಾಗಿದೆ. ಪರಾವಲಂಬಿಗಳ ಸಂಖ್ಯೆಯೂ ಏರುತ್ತಿದೆ. ಆದರೆ ಶರಣರ ಕಾಯಕ ತತ್ವವು ಕಠಿಣವಾದ ನಿರುದ್ಯೋಗ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಲು ಶಕ್ಯವಾಗಿದೆ. ಯಾವ ಕಾಯಕವನ್ನೂ ಕೀಳಾಗಿ ಕಾಣದೆ ತಮ್ಮ ತಮ್ಮ ಮನೆಕೆಲಸಗಳಲ್ಲಿ ತೊಡಗಿ, ಆ ಕಾಯಕವನ್ನು ಮಾಡುವುದರಿಂದ ಸಮಾಜಕ್ಕೆ ಬೇಕಾದ ಎಲ್ಲಾ ಬಗೆಯ ಮೂಲವಸ್ತುಗಳೂ ದೊರೆತಂತಾಗುತ್ತದೆ. ಹೀಗೆ ಮಾಡುವುದರಿಂದ ಒಂದೆಡೆ ನಿರುದ್ಯೋಗ ನಿವಾರಣೆಯಾಗುತ್ತದೆ ಮತ್ತೊಂದೆಡೆ ಸ್ವಾವಲಂಬಿಯಾಗುವ ಅವಕಾಶವಾಗುತ್ತದೆ. ಕಾಯಕ ಯಾರ ಹಂಗಿಗೂ ಒಳಗಾಗದೆ, ತಾನೇ ತನ್ನ ಒಲವು ಮತ್ತು ಅನುಕೂಲಗಳಿಗೆ ತಕ್ಕಂತೆ ಆರಿಸಿಕೊಳ್ಳಬೇಕಾದ ವೃತ್ತಿ. ಇದಕ್ಕೆ ಬಹಳ ಬಂಡವಾಳ ಬೇಕಿಲ್ಲ. ದೊಡ್ಡ ದೊಡ್ಡ ಉದ್ಯಮಗಳನ್ನು ಸ್ಥಾಪಿಸಲು ಕೋಟಿ ಕೋಟಿ ಹಣ ಬೇಕು. ದೇಶದ ನಿರುದ್ಯೋಗಿಗಳಿಗೆ ದೊಡ್ಡ ಉದ್ಯಮಗಳಿಂದ ಹೆಚ್ಚು ಪ್ರಯೋಜನವಾಗಲಾರದು. ಅವರಿಗೆ ಸ್ವದತ್ತ ವೃತ್ತಿಯಾದ ಗ್ರಾಮೋದ್ಯೋಗವೇ ಕಾಯಕವಾಗಬೇಕು. ಆ ಕಾಯಕವೇ ಅವರಿಗೆ ಕಾಮಧೇನು ಕಲ್ಪವೃಕ್ಷವಾಗಬೇಕು.

---

ಇಸ್ಲಾಂ ಧರ್ಮ ನಿಂತಿರುವುದು ಐದು ಸ್ತಂಭಗಳ ಆಧಾರದ ಮೇಲೆ : ಪ್ರಾರ್ಥನೆ, ದಾನ, ಉಪವಾಸ, ಧರ್ಮಯುದ್ಧ ಮತ್ತು ಮಕ್ಕಾಯಾತ್ರೆ. ಈ ಐದರಲ್ಲಿ ಪ್ರಾರ್ಥನೆಯ ಸ್ಥಾನ ಎಷ್ಟು ದೊಡ್ಡದೋ ದಾನದ ಸ್ಥಾನವೂ ಅಷ್ಟೇ ದೊಡ್ಡದು.

ಮಹಮದ್ ಗುರು ಒಮ್ಮೆ 'ದಾನವು ಪ್ರತಿ ಮುಸ್ಲಿಮನೂ ಮಾಡಲೇಬೇಕಾದ ಕರ್ತವ್ಯ' ಎಂದರು.

'ದಾನ ಮಾಡಲು ಏನೂ ಇಲ್ಲದವನು ಏನು ಮಾಡಬೇಕು, ಗುರುವೆ?' ಎಂದು ಸಂಗಡಿಗರು ಕೇಳಿದರಂತೆ.

'ದೇವರು ಕೊಟ್ಟಿರುವ ಕೈಗಳಿಂದ ದುಡಿದು, ಸಂಪಾದಿಸಿ ದಾನಕೊಡಬೇಕು' ಎಂದರು ಗುರು.

## ಪ್ರಾರ್ಥನೆಯ ಪುಣ್ಯ

'ದುಡಿದರೂ ಸಂಪಾದನೆಯಾಗದೆ ಹೋದರೆ?'

'ದುಃಖದಲ್ಲಿರುವವರಿಗೆ ಕೈಲಾದ ಸಹಾಯ ನೀಡಬೇಕು'

'ಅದೂ ಆಗದೆ ಹೋದರೆ?'

'ಅದೂ ಆಗದೆ ಹೋದವರು ಸತ್ಕಾರ್ಯಗಳನ್ನು ಮಾಡಲಿ, ದುಷ್ಕಾರ್ಯಗಳನ್ನು ಮಾಡದಿರಲಿ. ಅದು ಅವರು ನಡೆಸುವ ದಾನ' ಎಂದರು ಗುರು.

ಇನ್ನೊಮ್ಮೆ 'ಮಾಡಿದ ಒಂದೊಂದು ಒಳ್ಳೆಯ ಕೆಲಸವೂ ದಾನವೇ. ನೆರೆಯವರನ್ನು ನಗುಮುಖದಿಂದ ಕಂಡರೆ, ಅದು ದಾನ. ನಿನ್ನ ಪಾತ್ರೆಯಿಂದ ಇನ್ನೊಬ್ಬ ಮುಸ್ಲಿಮನ ಪಾತ್ರೆಗೆ ನೀರು ಹುಯಿದರೆ, ಅದು ದಾನ. ದಾರಿಯಲ್ಲಿ ಬಿದ್ದಿರುವ ಅಪಾಯಕರವಾದ ವಸ್ತುಗಳನ್ನು ಒಂದು ಪಕ್ಕಕ್ಕೆ ತಳ್ಳಿಹಾಕುವುದು, ಅದೂ ದಾನವೇ. ವಿಧವೆಯರ ಪರವಾಗಿಯೂ ನಿರ್ಗತಿಕರ ಪರವಾಗಿಯೂ ಯಾವನು ಶ್ರಮಿಸುವನೋ ಅವನಿಗೆ ಪ್ರಾರ್ಥನೆಯ ಪುಣ್ಯ, ಉಪವಾಸ ಮಾಡಿದ ಪುಣ್ಯ ಲಭಿಸುತ್ತದೆ' ಎಂದರು.

(ವಿಚಾರ ರಶ್ಮಿ ಗ್ರಂಥದಿಂದ)